ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 1, July-August 2022, Pp. 111-115.**
**©*IIMRD*, Mysuru**
IIMRD JOURNALS
**www.iimrd.com**

# ಗ್ರಾಮೀಣ ಮಹಿಳಾ ಉದ್ಯಮಶೀಲತೆಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ

**ನಳಿನಿ. ಎ. ಕೆ**

ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.
ತಾಲೂಕು ಹೊಸಪೇಟೆ, ಜಿಲ್ಲೆ ವಿಜಯನಗರ.

**ಸಾರಾಂಶ: (Abstract)**

*ಮಹಿಳೆ ಇತಿಹಾಸದಲ್ಲಿ ಅನೇಕ ನೆಲೆಗಳಲ್ಲಿ ಗುರುತಿಸಿಕೊಂಡು ಬಂದಿದ್ದಾಳೆ ಮತ್ತು ಜಾಗತಿಕ ನೆಲೆಗಟ್ಟಿನಲ್ಲಿ ಮಹಿಳೆಯ ಪಾತ್ರ ಮಹತ್ತರವಾದುದು. ಅವಕಾಸ ನೀಡಿದರೆ ಯಾವುದೇ ಕ್ಷೇತ್ರದಲ್ಲಾದರೂ ಮಹಿಳೆ ಜಯಿಸ ಬಲ್ಲಳು ಎನ್ನುವ ನಂಬಿಕೆ ಮತ್ತು ಆತ್ಮ ವಿಶ್ವಾಸವನ್ನು ಹೊಂದಿದ್ದಾಳೆ. ನಮ್ಮಲ್ಲಿರುವ ಸಾಮಾಜಿಕ ವ್ಯವಸ್ಥೆ ಮಹಿಳೆಯ ಸಾಂದರ್ಭಿಕವಾಗಿ ಅವಳನ್ನು ದೈಹಿಕವಾಗಿ ದುರ್ಬಲಳು ಎನ್ನುವಂತೆ ಪುರುಷ ಪ್ರಧಾನ ಸಮಾಜ ಭಾವಿಸಿದೆ. ಆದರೆ ಮಹಿಳೆ ಇದಕ್ಕೆ ತದ್ವಿರುದ್ಧವಾಗಿ ಇಂದು ಎಲ್ಲ ರಂಗದಲ್ಲೂ ಕೂಡ ತನ್ನ ಛಾಪು ಮೂಡಿಸುತ್ತಿದ್ದಾಳೆ. ಜಾಗತಿಕ ನೆಲೆಯಲ್ಲಿ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಮಹಿಳೆ ತನ್ನ ಕೌಶಲ್ಯ ಮತ್ತು ಸಾಮರ್ಥ್ಯವನ್ನು ತೋರಿಸುತ್ತಿದ್ದಾಳೆ.*

**ಮುಖ್ಯಪದಗಳು (Keywords):** ಗ್ರಾಮೀಣ ಪ್ರದೇಶ, ಉದ್ಯಮ, ಮಹಿಳೆ, ಬಹುರಾಷ್ಟ್ರೀಯ ಕಂಪನಿ.

## ಪೀಠಿಕೆ

ಪ್ರಾಚೀನ ಕಾಲದಿಂದಲೂ ಮಹಿಳೆ ನಾಲ್ಕನೇ ದರ್ಜೆಯ ಪ್ರಜೆಯಾಗಿ ವಿವಿಧ ಶೋಷಣೆಗೊಳಗಾಗುತ್ತಾ ಬಂದಿದ್ದಾಳೆ. ಭಾರತದಲ್ಲಿ ಮಹಿಳಾ ವಿಮೋಚನಾ ಚಳುವಳಿಯು 18ನೇ ಶತಮಾನದಲ್ಲಿ ಪ್ರಾರಂಭವಾದರೂ ಸ್ವಾತಂತ್ರ್ಯದ ನಂತರ ಮಹಿಳೆಯರಿಗೆ ಸಂವಿಧಾನ ಬದ್ಧವಾಗಿ ಪುರುಷ ಸಮಾನ ಹಕ್ಕುಗಳು, ಸ್ವಾತಂತ್ರ್ಯ, ಹಾಗೂ ಸಮಾನ ಅವಕಾಶಗಳು ದೊರೆತವು ಮಹಿಳೆಯರ ಅಭಿವೃದ್ಧಿಗೆ ಪೂರಕವಾಗಿ ಶಾಸನಗಳನ್ನು ಜಾರಿಗೊಳಿಸುವುದು ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಿರುವುದು ಇತ್ಯಾದಿ ಸರಕಾರದ ಕ್ರಮಗಳು ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣಕ್ಕೆ ಪ್ರಮುಖ ಹೆಜ್ಜೆಗಳಾಗಿವೆ. ಭಾರತ ಆರ್ಥಿಕ ನೀತಿಗಳು ಯಾವಾಗಲೂ ಸಮಾಜದ ಬಡವರ, ಶೋಷಿತರ ಮತ್ತು ಅನಾನುಕೂಲ ವರ್ಗಗಳ ಅದರಲ್ಲೂ ವಿಶೇಷವಾಗಿ ಮಹಿಳೆಯರ ಅಭಿವೃದ್ಧಿಗೇ ಹೆಚ್ಚು ಒತ್ತು ನೀಡಿವೆ. ಸಮಾಜದ ಅಭಿವೃದ್ಧಿಗೆ ಮಹಿಳೆಯರು ಮತ್ತು ಪುರುಷರು ಅನ್ಯೂನತೆಯಿಂದ ಸಮಾನತೆಯ ಮೌಲ್ಯಗಳೊಂದಿಗೆ ಪ್ರಗತಿ ಹೊಂದಬೇಕಾಗಿದೆ. ಮನುಷ್ಯ ಮನುಷ್ಯನನ್ನು ಒಂದು ಗೂಡಿಸುವ ಅಭಿವೃದ್ಧಿಗೆ ಚಾಲನೆ ಪೂರಕವಾಗಿರುವ ಸ್ವ-ಸಹಾಯ

*Please cite this article as:* *ನಳಿನಿ ಎ ಕೆ.* (2022). ಗ್ರಾಮೀಣ ಮಹಿಳಾ ಉದ್ಯಮಶೀಲತೆಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.. 111-115.*

ಸಂಘಗಳು ಸುಂದರ ಸಮಾಜದ ಪರಿಕಲ್ಪನೆಯೊಂದಿಗೆ ನಿರ್ದಿಷ್ಟ ಉದ್ದೇಶಗಳನ್ನು ಕಂಡುಕೊಂಡು ಸ್ವ–ಸಹಾಯ ಸಂಘಗಳನ್ನು ಹಮ್ಮಿಕೊಳ್ಳಲಾಗಿದೆ.

ಆರನೇಯ ಪಂಚವಾರ್ಷಿಕ ಯೋಜನೆಯು ಮಹಿಳಾ ಉದ್ಯಮಿಗಳ ಕಡೆಗೆ ಬಹಳಷ್ಟು ಲಕ್ಷ ನೀಡಿದೆ. ಮೊದಲನೆಯ ಬಾರಿಗೆ ಈ ಯೋಜನೆಯಲ್ಲಿ "ಮಹಿಳೆಯರ ಅಭಿವೃದ್ಧಿ" ಎಂಬ ಅಂಶವನ್ನು ಸೇರಿಸಲಾಯಿತು. ಈ ಬಗ್ಗೆ ಅನೇಕ ಸಹಕಾರಿ ಗುಂಪುಗಳನ್ನು ವಿಶೇಷವಾಗಿ ಕಾರ್ಯ ಮಾಡುವ ಗುಂಪುಗಳನ್ನು ಮತ್ತು ರಾಷ್ಟ್ರೀಯ ಸಮ್ಮೇಳನಗಳನ್ನು ಮಾಡಲಾಯಿತು. ಇತ್ತೀಚೆಗೆ ಮಹಿಳಾ ಕಲ್ಯಾಣ ಕೇಂದ್ರ ಎಂಬ ಒಂದು ಸಂಸ್ಥೆಯನ್ನು ಮಾಡಲಾಯಿತು. ಅದು ಮಹಿಳೆಯರು ಸ್ವತಂತ್ರ ಉದ್ಯಮವನ್ನು ಮಾಡಲು ಎಲ್ಲಾ ವಿಧವಾದ ಸಹಾಯ ಮತ್ತು ಸಹಕಾರಗಳನ್ನು ಕೊಡುತ್ತದೆ.

**ಸಾಹಿತ್ಯವಲೋಕನ**

ಬಿ.ವಿ ಲಕ್ಷ್ಮಿದೇವಿ (2019). ಈ ಅಧ್ಯಯನದಲ್ಲಿ ತಿಳಿಸಿರುವಂತೆ ಮಹಿಳಾ ಉದ್ಯಮಶೀಲರ ಸಮಸ್ಯೆಗಳು ಮತ್ತು ಮಲ್ನಾಡ್ ಪ್ರದೇಶದಲ್ಲಿನ ಯೋಜನೆಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಕರ್ನಾಟಕದಲ್ಲಿ ಮಲೆನಾಡು ಪ್ರದೇಶವು ಒಂದು ಭಾಗವಾಗಿದ್ದು ಈ ಪ್ರದೇಶವು ಶ್ರೀಮಂತ ಭೌಗೋಳಿಕ ಭೂದೃಶ್ಯವು ಆರ್ಥಿಕ ಮತ್ತು ಸಾಮಾಜಿಕ ಸಮೃದ್ಧಿ ಸಾಮರ್ಥ್ಯವನ್ನು ಒದಗಿಸುವ ಪ್ರದೇಶವಾಗಿದೆ. ಇದು ನೈಸರ್ಗಿಕ ಸಂಪನ್ಮೂಲಗಳು, ಭೌಗೋಳಿಕ ವೈವಿಧ್ಯತೆಗಳು, ಹೆಚ್ಚು ಕೃಷಿ ಚಟುವಟಿಕೆಗಳಿಗೆ ಸೂಕ್ತವಾದ ಭೂ ದೃಶ್ಯಗಳನ್ನು ಇಲ್ಲಿ ಕಾಣಬಹುದು. ಹೆಚ್ಚು ಅಡಿಕೆ ಮತ್ತು ಕಾಫಿಯ ದೊಡ್ಡ ಉತ್ಪಾದನೆಯನ್ನು ಈ ಪ್ರದೇಶದಲ್ಲಿ ನೋಡಬಹುದು ಇದು ಪ್ರಮುಖ ವ್ಯಾಪಾರ ಚಟುವಟಿಕೆಗಳಿಗೆ ಸೂಕ್ತವಾಗಿದ್ದು ಉತ್ತಮ ಮೂಲಸೌಕರ್ಯಗಳನ್ನು ಸಹ ಹೊಂದಿದೆ. ಇಲ್ಲಿ ಇರುವವರಿಗೆ ಅದರ ಸಂಪನ್ಮೂಲಗಳ ಬಹುಪಾಲು ಭಾಗವು ನಿರುದ್ಯೋಗಿಗಳಾಗಿರುವುದು ಕಂಡುಬರುತ್ತದೆ. ಉದ್ಯೋಗ ಉತ್ಪಾದನೆ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಉದ್ಯಮಶೀಲತೆಯ ಆರ್ಥಿಕತೆಗೆ ಹೊಸ ಭಾಷೆ ಅಥವಾ ಸಂಪನ್ಮೂಲಗಳ ಅತ್ಯುತ್ತಮ ಉದ್ಯೋಗವನ್ನು ಖಾತ್ರಿಪಡಿಸುವ ವ್ಯವಸ್ಥೆಯಲ್ಲಿನ ಸಾಮಾಜಿಕ ಪರಿವರ್ತನೆಯ," ಸ್ವಯಂ ಉದ್ಯೋಗ ಅಥವಾ ಸ್ವಯಂ ಸಬಲೀಕರಣ" ಎಂದು ಉದ್ಯಮಶೀಲತೆಗೆ ಇದು ಸೃಷ್ಟಿಸಿದೆ. ಈ ಪ್ರದೇಶದ ಆರ್ಥಿಕ ಅಭಿವೃದ್ಧಿಯು ಮಹಿಳಾ ಸಬಲೀಕರಣಕ್ಕೆ ಮಾತ್ರವಲ್ಲದೆ ಮಹಿಳೆಯರ ನೇತೃತ್ವದ ಸಮಯವು ಅಭಿವೃದ್ಧಿ ಪಡಿಸಿದೆ.

ಆರ್ತಿ ಚಾಂದನಿ (2012). ಈ ಅಧ್ಯಯನದಲ್ಲಿ ಹೇಳಿರುವಂತೆ ಸ್ವಸಹಾಯ ಸಂಘಗಳು ಮತ್ತು ಕಿರುಬಂಡವಾಳದ ಮೂಲಕ ಮಹಿಳಾ ಸಬಲೀಕರಣ ಎಂಬ ವಿಷಯದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಮಹಿಳೆಯರು ಅನೇಕ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನಿರ್ಬಂಧನೆಗಳಿಗೆ ಒಳಪಟ್ಟಿರುತ್ತಾರೆ. ಅಂದರೆ ಮಹಿಳೆಯರಿಗೆ ಜೀವನದಲ್ಲಿ ತಾರತಮ್ಯ ಮತ್ತು ಹೊರಗಿಡುವಿಕೆ ಯನ್ನು ಎದುರಿಸುತ್ತಿರುವುದನ್ನು ಬಹುತೇಕ ಎಲ್ಲ ಸಮಾಜಗಳಲ್ಲಿಯೂ ನಾವು ನೋಡಿದ್ದೇವೆ. ಹೆಚ್ಚಾಗಿ ಗ್ರಾಮೀಣ ಭಾಗದಲ್ಲಿನ ಮಹಿಳೆಯರಿಗೆ ಸಂಪನ್ಮೂಲಗಳ ಮೇಲೆ ಕಡಿಮೆ ನಿಯಂತ್ರಣವನ್ನು ತೋರುವುದು ಮಹಿಳೆಯರು ಪುರುಷರಿಗಿಂತ ಕಡಿಮೆ ಶಕ್ತಿಯನ್ನು ಹೊಂದಿರುತ್ತಾರೆ ಎನ್ನುವುದನ್ನು ಹೇಳುವುದು ಹೀಗೆ ಮಹಿಳೆಯರು

50 ಪ್ರತಿಶತದಷ್ಟು ಒಟ್ಟು ಜನಸಂಖ್ಯೆ ಮತ್ತು ಪ್ರತಿ ಸಮಾಜದ ಮೂರನೇ ಒಂದು ಭಾಗದಷ್ಟು ಮಾನವ ಸಂಪನ್ಮೂಲದಲ್ಲಿ ಹೆಚ್ಚಾಗಿ ಪುರುಷರಿಗೆ ಪ್ರೋತ್ಸಾಹ ನೀಡಿ ಮಹಿಳೆಯರನ್ನು ಕೆಳಮಟ್ಟದಲ್ಲಿ ನೋಡುವುದನ್ನು ಗ್ರಾಮಗಳಲ್ಲಿ ನಾವು ಕಾಣಬಹುದು. ಇಂತಹ ಸಂಪ್ರದಾಯಗಳನ್ನು ಹೋಗಲಾಡಿಸಲು ಸ್ವಸಹಾಯ ಗುಂಪುಗಳ ಮುಖಾಂತರ ಮಹಿಳೆಯರು ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ.

ತನುಜ (2007). ಸಂಶೋಧನಾ ಸಂಪ್ರಬಂಧವಾದ "ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ".ಮಂಗಳೂರು ತಾಲೂಕಿನ ಒಂದು ಅಧ್ಯಯನ: ಒಂದು ಪ್ರಕರಣದ ಅಧ್ಯಯನದಲ್ಲಿ ಯಾವುದೇ ಉದ್ಯಮ ಅಧ್ಯಯನ ಮಾಡುವಾಗ ಸಾಮಾನ್ಯವಾಗಿ ಎಲ್ಲಾ ಅಂಶಗಳನ್ನು ಪರಿಗಣಿಸಲಾಗುತ್ತದೆ ಆದರೆ ಈ ಅಧ್ಯಯನದಲ್ಲಿ ಮಹಿಳಾ ಸಬಲೀಕರಣವನ್ನು ಕೇಂದ್ರವಾಗಿರಿಸಿ ಕಿರು ಉದ್ಯಮವನ್ನು ಅಧ್ಯಯನಕ್ಕೆ ಪರಿಗಣಿಸಲಾಗಿದೆ ಸಮಗ್ರವಾದ ಮಹಿಳೆಯರ ಉದ್ಯಮಶೀಲತೆಯ ಬಗ್ಗೆ ಹೆಚ್ಚಿನ ಒತ್ತನ್ನು ನೀಡದ ಕಾರಣ ಈ ಒಂದು ವಿಷಯ ಅಧ್ಯಯನಕ್ಕೆ ಅವಶ್ಯಕವಾಗಿದೆ.

**ಅಧ್ಯಯನದ ಉದ್ದೇಶಗಳು**

- ಗ್ರಾಮಗಳಲ್ಲಿ ಸ್ವ–ಸಹಾಯ ಸಂಘಗಳಲ್ಲಿನ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಗಳನ್ನು ಕಂಡುಕೊಳ್ಳಲಾಗುವುದು.
- ಮಹಿಳಾ ಉದ್ಯಮಶೀಲತೆಯಲ್ಲಿನ ಸವಾಲು ಮತ್ತು ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುವುದು.
- ಸ್ವ–ಸಹಾಯ ಸಂಘಗಳ ಸದಸ್ಯರ ಉಳಿತಾಯಕ್ಕೆ ಸಂಬಂದಿಸಿದ ಸರಕಾರದಿಂದ ಇರುವ ಯೋಜನೆಗಳ ಬಗ್ಗೆ ತಿಳಿದುಕೊಳ್ಳಲಾಗುವುದು.

**ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ**

ಪ್ರಸ್ತುತ ಅಧ್ಯಯನಕ್ಕೆ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ತಾಲೂಕು ಅತ್ಯಂತ ಹಿಂದುಳಿದ ತಾಲೂಕಾಗಿದ್ದು, ನಿರುದ್ಯೋಗ, ಬಡತನ, ಅನಕ್ಷರತೆ ಮತ್ತು ಮೂಲಸೌಕರ್ಯಗಳಾದ ಆರೋಗ್ಯ ರಕ್ಷಣೆ ಕೊರತೆಯಂತಹ ಅನೇಕ ಸಮಸ್ಯೆಗಳು ಇಲ್ಲಿ ಸಾಮಾನ್ಯ ಪ್ರವೃತ್ತಿಯಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಒಟ್ಟು 74 ಗ್ರಾಮ ಹಾಗೂ 3 ಪಟ್ಟಣಳಿದೆ.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮಾಹಿತಿ ಮತ್ತು ಅನುಷಂಗಿಕ ಮಾಹಿತಿ ಎರಡು ವಿಧಾನಗಳಿಂದ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಅವಲೋಕನ, ಪ್ರಶ್ನಾವಳಿ, ಸಂದರ್ಶನ, ಗುಂಪುಚರ್ಚೆ ಮುಂತಾದ ಸಂಶೋಧನಾ ತಂತ್ರಗಳನ್ನು ಬಳಸಿ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ.

**ಸ್ವ–ಸಹಾಯ ಸಂಘಗಳಲ್ಲಿ ಮಹಿಳಾ ಉದ್ಯಮಶೀಲರ ಪಾತ್ರ**

ಸ್ವ–ಸಹಾಯ ಸಂಘಗಳ ಹುಟ್ಟು ಮತ್ತು ಅವುಗಳ ಸಾಧನೆಗಳಿಂದಾಗಿ ಗ್ರಾಮೀಣ ಭಾರತದ ಒಟ್ಟು ಸ್ವರೂಪ ಬದಲಾಗತೊಡಗಿತು. ಭಾರತದಲ್ಲಿ ಸ್ವ–ಸಹಾಯ ಚಳುವಳಿಯನ್ನು 1980ರ ದಶಕದಲ್ಲಿ ಪ್ರಾರಂಭವಾಯಿತು. ಈ ಚಳುವಳಿಯನ್ನು ನಮ್ಮ ನೆರೆಯ ಬಾಂಗ್ಲಾ ದೇಶದ "ಪ್ರೊ.ಮೊಹಮ್ಮದ್

ಯೂನಸ್" ರವರು ಸ್ಥಾಪಿಸಿದರು. ನಬಾರ್ಡ್ ಸಂಸ್ಥೆಯು 1986–87ರಲ್ಲಿ ಉಳಿತಾಯ ಮತ್ತು ಸಾಲದ ವಿಷಯಕ್ಕೆ ಸಂಬಂಧಿಸಿ ಬೆಂಬಲವನ್ನು ನೀಡಿತು ಅದು ಸ್ವ–ಸಹಾಯ ಸಂಘದ ಮಹಾಕ್ರಾಂತಿಗೆ ನಾಂದಿಯಾಯಿತು.

ಸ್ವ–ಸಹಾಯ ಸಮೂಹವು ಸ್ವ–ಪ್ರಜ್ಞೆ, ಸ್ವ–ಪ್ರೇರಣೆ ಹಾಗೂ ಪರಸ್ಪರ ನಂಬಿಕೆಯೊಂದಿಗೆ ತಮ್ಮ ಆರ್ಥಿಕ, ಸಾಮಾಜಿಕ ಅಗತ್ಯಗಳನ್ನು ತಾವೇ ತಮ್ಮ ಸ್ವ–ಪ್ರಯತ್ನದಿಂದ ಅಂದರೆ ಸಹಕಾರಿ ತತ್ವದ ಸಾಮೂಹಿಕ ನೆಲೆಯಲ್ಲಿ ಪೂರೈಸಿಕೊಳ್ಳುವ ಉದ್ದೇಶದಿಂದ 15 ರಿಂದ 20 ಜನರನ್ನೊಳಗೊಂಡ ಒಂದು ಚಿಕ್ಕ ಸಮೂಹವಾಗಿರುತ್ತದೆ. ತಮ್ಮಷ್ಟಕ್ಕೆ ತಾವೇ ಆರ್ಥಿಕ ಚಟುವಟಿಕೆಗಲನ್ನು ನಿರ್ವಹಿಸುವ ದೃಷ್ಟಿಯಿಂದ ಒಂದೆಡೆ ಸೇರುವ ಜನರ ಸಮೂಹಗಳೇ ಸ್ವ–ಸಹಾಯ ಸಂಘಗಳು ಎಂದು ಕರೆಯಬಹುದು. ಸ್ವ–ಸಹಾಯ ಸಂಘಗಳ ಸದಸ್ಯರು ನಿರಂತರವಾಗಿ ಆರು ತಿಂಗಳ ಕಾಲ ಉಳಿತಾಯವನ್ನು ಮಾಡಿದ ನಂತರವೇ ಆ ಸದಸ್ಯರು ಸಾಲವನ್ನು ಪಡೆಯಬಹುದು. ಸದಸ್ಯರು ತಮ್ಮ ಅಗತ್ಯತೆಗಳನ್ನು ಅವಲಂಬಿಸಿ ಮತ್ತು ಸಂಘಗಳಲ್ಲಿ ಲಭ್ಯವಿರುವ ಹಣವನ್ನು ಕಿರು ಸಾಲದ ಮೂಲಕ ಪಡೆದುಕೊಂಡು ಉದ್ಯಮವನ್ನು ಮಾಡಲು ಸಂಘಗಳು ಹೆಚ್ಚು ಅನುಕೂಲವಾಗಿವೆ. ಈ ಅಧ್ಯಯನವು ಸಂಘಗಳಿಂದ ಮಹಿಳಾ ಉದ್ಯಮಶೀಲರು ಹೇಗೆ ಅಭಿವೃದ್ಧಿ ಆಗಿದ್ದಾರೆ ಎನ್ನುವುದನ್ನು ನೊಡಬಹುದಾಗಿದೆ. ಮಹಿಳಾ ಉದ್ಯಮಶೀಲತೆ ಎನ್ನುವುದು ಮಹಿಳೆ ತನ್ನ ಜೀವನೋಪಾಯಕ್ಕಾಗಿ ಸಮಾಜ ಒಪ್ಪುವ ರೀತಿಯಲ್ಲಿ ಸ್ವತಃ ಆದಾಯದ ಉದ್ಯೋಗವನ್ನು ಮಾಡಿಕೊಂಡು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುವ ಕಾರ್ಯಕ್ಕೆ ಉದ್ಯಮಶೀಲತೆ ಎನ್ನಲಾಗುವುದು. ಮಹಿಳೆಯು ತಾನೇ ನೇತೃತ್ವವಹಿಸಿ ಉದ್ಯಮವನ್ನು ಸ್ಥಾಪಿಸಿ ಅದಕ್ಕೆ ಬೇಕಾಗುವ ಸಾಮಾನುಗಳನ್ನು ತಾನೇ ಹೊಸದಾಗಿ ಸೃಷ್ಟಿಸಿ ಅಭಿವೃದ್ಧಿ ಹೊಂದುವುದೇ ಮಹಿಳಾ ಉದ್ಯಮಶೀಲತೆ ಎನ್ನಲಾಗಿದೆ.

**ಕೋಷ್ಟಕ 1. ಗ್ರಾಮೀಣ ಸ್ವ–ಸಹಾಯ ಸಂಘಗಳ ಮೂಲಕ ಮಹಿಳಾ ಉದ್ಯಮಶೀಲರು**

| **ಕ್ರ.ಸಂ.** | **ಉದ್ಯಮಗಳ ಹೆಸರು** | **ಪ್ರತಿಕ್ರಯಿಸಿದ ಮಹಿಳಾ ಉದ್ಯಮಶೀಲರ ಸಂಖ್ಯೆ** | **ಶೇಕಡವಾರು** |
|---|---|---|---|
| 1 | ಕಿರಾಣಿ ಉದ್ಯಮ | 25 | 25.00 |
| 2 | ಬಟ್ಟೆ ಉದ್ಯಮ | 20 | 20.00 |
| 3 | ಹೋಟೆಲ್ ಉದ್ಯಮ | 30 | 30.00 |
| 4 | ಹಿಟ್ಟಿನ ಗಿರಣಿ ಉದ್ಯಮ | 10 | 10.00 |
| 5 | ಬ್ಯೂಟಿ ಪಾರ್ಲರ್ | 15 | 15.00 |
| | ಒಟ್ಟು | 100 | 100 |

**ಮೂಲ: ಕ್ಷೇತ್ರ ಕಾರ್ಯ**

ಪ್ರಸ್ತುತ ಈ ಕೋಷ್ಟಕದಲ್ಲಿ ಅಧ್ಯಯನಕ್ಕೆ ಒಳಪಟ್ಟಂತೆ ಗ್ರಾಮೀಣ ಸ್ವ–ಸಹಾಯ ಸಂಘಗಳ ಮೂಲಕ ಉದ್ಯಮಗಳಲ್ಲಿ ತೊಡಗಿರುವ 100 ಮಹಿಳಾ ಉದ್ಯಮಿಗಳ ಚಿತ್ರಣ ವಿವರಿಸಲಾಗಿದೆ.

**ಉಪಸಂಹಾರ**

ಸ್ವ–ಸಹಾಯ ಸಂಘಗಳಿಗೆ ಸೇರಿದ ನಂತರ ಬಹಳಷ್ಟು ಮಹಿಳೆಯರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಶಕ್ತರಾಗಿದ್ದಾರೆ. ಅಷ್ಟೇ ಅಲ್ಲದೇ ಸ್ವ–ಸಹಾಯ ಸಂಘಗಳು ಗ್ರಾಮೀಣ ಭಾಗದ ಜನರಲ್ಲಿ ಶ್ರಮ ಗೌರವದ ಭಾವನೆಯನ್ನು ಉದ್ದೀಪನಗೊಳಿಸುತಿರುವುದರಿಂದ ಜನರು ಆಲಸಿಗಳಾಗಿ, ಮೈಗಳ್ಳರಾಗಿ ಕಾಲಹರಣ ಮಾಡುವ ಪ್ರಮೇಣ ತಪ್ಪುತ್ತಿದೆ. ಅದರಂತೆ ಕುಟುಂಬ ಯೋಜನೆಯ ಮಹತ್ವವು ಹೆಚ್ಚುತ್ತಿದೆ. ಇಂದು ಕರ್ನಾಟಕದ ಹಲವು ಭಾಗಗಳಲ್ಲಿ ತಲೆಯೆತ್ತಿರುವ ಸರ್ಕಾರೇತರ ಸಂಘಸಂಸ್ಥೆಗಳು ಮಹಿಳಾ ಸ್ವ–ಸಹಾಯ ಸಂಘಗಳನ್ನು ಸ್ಥಾಪಿಸಿಕೊಂಡು ಇವುಗಳ ಅಡಿಯಲ್ಲಿ ಮಹಿಳೆಯರು ಜಾಗೃತಿ ಮೂಡಿಸಲು ಹಲವಾರು ವಿಶಿಷ್ಟ ಯೋಜನೆಗಳನ್ನು ರೂಪಿಸಿಕೊಂಡು ಮುನ್ನಡೆಯುತ್ತಿದೆ. ಹೀಗೆ ಸ್ವ–ಸಹಾಯ ಸಂಘಗಳು ಮಹಿಳಾ ಉದ್ಯಮಶೀಲತೆಗೆ ಹೆಚ್ಚು ಅನುಕೂಲ ಮಾಡಿ ಮಹಿಳಾ ಸಬಲೀಕರಣಹೊಂದಿ ಒಂದು ಮೈಲಿಗಲ್ಲು ಆಗಿ ಸದೃಡ ಭಾರತದ ನಿರ್ಮಾಣಕ್ಕೆ ನಾಂದಿ ಹಾಡುತ್ತಿದೆ.

**ಪರಾಮರ್ಶನ ಗ್ರಂಥಗಳು**


- ಆರ್ತಿ ಚಾಂದನಿ. (2012). ವುಮೆನ್ ಎಂಪವರ್ಮೆಂಟ್ ಥ್ರೋ ಎಸ್.ಎಚ್. ಅಂಡ್ ಮೈಕ್ರೋಫೈನಾನ್ಸ್, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಬಿಸಿನೆಸ್ ಕ್ವಾಂಟಿಟೇಟಿವ್ ಎಕನಾಮಿಕ್ಸ್ ಅಂಡ್ ಅಪ್ಲೈಡ್ ಮ್ಯಾನೇಜ್‌ಮೆಂಟ್ ರಿಸರ್ಚ್, ತಮಿಳುನಾಡು.
- ಕಿರಣ್ ಉರ್ವಾ. (2016). ಸ್ವ–ಸಹಾಯ ಸಂಘ ಹೆಜ್ಜೆ ಗುರುತು. ಮಹಿಮಾ ಪಬ್ಲಿಷರ್ಸ್, ಮಂಗಳೂರು.
- ತನುಜ. (2007). ಮಹಿಳಾ ಸಬಲೀಕರಣದಲ್ಲಿ ಕಿರು ಮಹಿಳಾ ಉದ್ಯಮಿಗಳ ಪಾತ್ರ–ಮಂಗಳೂರು ತಾಲೂಕಿನ ಒಂದು ಅಧ್ಯಯನ. ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
- ನಿಂಗಯ್ಯ ಟಿ. (2012). ಸ್ವ–ಸಹಾಯ ಸಂಘ: ಒಂದು ಅವಲೋಕನ. ಕರ್ನಾಟಕ ವಿಕಾಸ, ಬೆಂಗಳೂರು.
- ಬಲಿಗರ್ ಜಿ.ಬಿ. (2011). ಉದ್ಯಮಶೀಲತೆಯ ಅಭಿವೃದ್ಧಿ ಮತ್ತು ಚಿಕ್ಕ ಕೈಗಾರಿಕೆಗಳ ನಿರ್ವಾಹಣೆ. ಅಶೋಕ ಪ್ರಕಾಶನ, ಹುಬ್ಬಳ್ಳಿ.
- ರೇಖಾ ಎಸ್.ಟಿ. (2018). ಮಹಿಳೆಯರ ಮೇಲಿನ ದೌರ್ಜನ್ಯ– ವಿವಿಧ ಆಯಾಮಗಳು. ಶ್ರೀ ಅನ್ನದಾನಿ ಭೈರವ ಪ್ರಕಾಶನ, ಬೆಂಗಳೂರು.
- ಲಕ್ಷ್ಮಿದೇವಿ ಬಿ.ವಿ. (2019). ವುಮೆನ್ ಎಂಟ್ರೆಪ್ರೆನುರ್ಶಿಪ್–ಪ್ರಾಬ್ಲೆಮ್ಸ್ ಅಂಡ್ ಪ್ರೋಸ್ಪೆಕ್ಟ್ಸ್ ಇನ್ ಮಲ್ನಾಡ್ ರೀಜೆನ್. ಕುವೆಂಪು ವಿಶ್ವ ವಿದ್ಯಾಲಯ ಶಿವಮೊಗ್ಗ.
- ಸದಾಶಿವ ಓ. ಹಲಸಗಿ. (2015). ಉದ್ಯಮಶೀಲತಾ ಅಭಿವೃದ್ಧಿ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರಗಿ.